ಉಟ್ಟುಬಿಟ್ಟಿರುವುದೇ ಆಗಿರುತ್ತಿತ್ತು. ಹಾಗೇ ನನ್ನ ಉಡುಪುಗಳಂತೆಯೇ ನನ್ನ ಯಜಮಾನನೂ...' ಭಾಗ್ಯವತಿಯ ಧ್ವನಿಯ ಮುಂದೆ ನನ್ನ ಲೇಖನಿ ತಗ್ಗಿತು. ಯಾವ ಲೇಖಕ ತಾನೇ ಗೋಜಲನ್ನು ಬರೆಯಬಲ್ಲ...

'ಅಮ್ಮಾವರೇ, ನಾನೀಗ ಅವೆಲ್ಲ ಉಡುಪುಗಳನ್ನು ಕಳಚಿ ಬಂದಿದ್ದೇನೆ. ಹಾಗೆಯೇ ಯಜಮಾನನನ್ನೂ ಸಹ. ಇಲ್ಲಿ ನನ್ನ ಅತ್ತೆ ಮಾವನ ಬಳಿ ಉಳಿದುಕೊಂಡಿದ್ದೇನೆ. ಇವರ ಮನೆ ಸಾರಿಸುತ್ತೇನೆ, ಮೇಜು ಸ್ವಚ್ಛಗೊಳಿಸುತ್ತೇನೆ. ನಾನೊಂದು ಹೊಲಿಗೆಯ ಮಶೀನನ್ನೂ ಇಟ್ಟುಕೊಂಡಿದ್ದೇನೆ. ನಾಲ್ಕಾರು ಬಟ್ಟೆಗಳನ್ನು ಹೊಲಿಯುತ್ತಾ ಊಟಕ್ಕೆ ದಾರಿ ಮಾಡಿಕೊಂಡಿದ್ದೇನೆ. ಖಾದಿಯ ಬಟ್ಟೆಯೇ ಆಗಲಿ ಅಥವಾ ಕೈಮಗ್ಗದ ಬಟ್ಟೆಯೇ ಆಗಲಿ ಅದೇ ಸಾಕು ನನಗೆ. ಆದರೆ ಯಾರೋ ಉಟ್ಟಿರುವ ಬಟ್ಟೆಯನ್ನಂತೂ ಧರಿಸುವುದಿಲ್ಲ.'

'ನನ್ನ ಮಾವ ರಾಜಿ ಮಾಡಿ ನನ್ನನ್ನು ಅಲ್ಲಿಗೆ ಕಳಿಸಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ನನ್ನ ಮನಸ್ಸಿನ ಮಾತು ಅರ್ಥವಾಗುತ್ತಿಲ್ಲ. ನಾನು ಈಗ ಹೇಗಿದ್ದೇನೆಯೋ ಹಾಗೇ ಇರುತ್ತೇನೆ. ನನಗಿನ್ನೇನೂ ಬೇಡ. ನೀವು ಒಂದು ಬಾರಿ ನನ್ನ ಮನದ ಮಾತುಗಳನ್ನು ಬರೆದುಬಿಡಿ, ನನಗದಷ್ಟೇ ಸಾಕು...'

ಈ ಕತೆಯು ಘಟಿಸಿದ್ದ ಭಾಗ್ಯವತಿಯ ಶರೀರವನ್ನು ನಾನು ಒಮ್ಮೆ ಬಿಗಿದಪ್ಪಿದೆ. ಅವಳ ಮಜಬೂತಾದ ದೇಹದಂತೆಯೇ ಅವಳ ಮನಸ್ಸೂ ಮಜಬೂತಾಗಿತ್ತು. ಈ ನಾಲ್ಕು ಗೋಡೆಗಳ ನಡುವೆ ಈಗ ಸ್ವಲ್ಪ ಸಮಯದ ಹಿಂದಷ್ಟೇ ನಮ್ಮ ಮಾತು ಮೆಣಸಿನ ಖಾರದಿಂದ ಹೆಂಡದ ಕಡೆಗೆ ನಂತರ ಹೆಂಡದಿಂದ ಕೊಲೆ–ಪಾತಕಗಳ ಕಡೆಗೆ ಸಾಗಿದ್ದರಿಂದ ನಾನು ಬಹಳವೇ ಹೆದರಿದ್ದೆ. ಅಂಥ ಜಾಗದಲ್ಲಿ ಭಾಗ್ಯವತಿ ಬಹಳ ಧೈರ್ಯದಿಂದ ಜೀವನ ಸಾಗಿಸುತ್ತಿದ್ದಳು.

ಹೊರಗೆ ರಸ್ತೆಯಲ್ಲಿ ಶಿಮ್ಲಾದಿಂದ ಬರುವ ಮೋಟಾರು ವಾಹನಗಳು ಸಾಗುತ್ತಿದ್ದವು. ಅವುಗಳಲ್ಲಿ ರೇಶಿಮೆ ಬಟ್ಟೆಗಳನ್ನು ಧರಿಸಿ ಸವಾರಿ ಮಾಡುವವರು ಹಲವು ಬಾರಿ ಒಂದರೆಕ್ಷಣ ಈ ಅಂಗಡಿಯಲ್ಲಿ ಚಹಾಕ್ಕಾಗಿ, ಸಿಗರೇಟಿನ ಪ್ಯಾಕ್‌ಗಾಗಿ, ಅಥವಾ ಬಿಸಿಬಿಸಿ ತಂದೂರಿ ರೋಟಿಗಳಿಗಾಗಿ ನಿಲ್ಲುತ್ತಿದ್ದರು. ಅವರು ಧರಿಸಿದ ರೇಶಿಮೆ ಬಟ್ಟೆಗಳು ಯಾರು ಉಟ್ಟು ಬಿಟ್ಟಿರುವ ಬಟ್ಟೆಗಳೋ ಬಲ್ಲವರಾರು? ಹಾಗೆ ಬಂದವರ ಮೇಜನ್ನು ಶುಚಿಗೊಳಿಸುತ್ತಿದ್ದವಳು, ಕುರ್ಚಿಗಳನ್ನು ಕೊಡವುತ್ತಿದ್ದವಳು ಖಾದಿ ಉಡುಪನ್ನು ಧರಿಸಿದ ಭಾಗ್ಯವತಿ, ತನ್ನ ಶರೀರದ ಮೇಲೆ ಬೇರೆ ಯಾರು ಉಟ್ಟು ಬಿಟ್ಟದ್ದನ್ನೂ ಧರಿಸಲು ನಿರಾಕರಿಸುವ ಭಾಗ್ಯವತಿ.

'ಅಮ್ಮಾವರೇ, ನಾನು ಅಂದು ನೀವು ಕೊಟ್ಟ ರೂಪಾಯಿಯನ್ನು ಜೋಪಾನವಾಗಿ ಇಟ್ಟುಕೊಂಡಿದ್ದೇನೆ.'

'ನಿಜವೇ? ಇಲ್ಲಿಯವರೆಗೂ?'

'ಹೌದಮ್ಮಾ! ಆಗ ನಾನು ಆ ರೂಪಾಯಿಯನ್ನು ನನ್ನ ಸಹಾಯಕಿಗೆ ಕೊಟ್ಟಿದ್ದೆ. ಅದರ ಮಾರನೆಯ ದಿನವೇ ನಾನು ಪೇಪರಿನಲ್ಲಿ ನಿಮ್ಮ ಫೋಟೊ ನೋಡಿದ್ದು. ನಾನು ಆಮೇಲೆ ಅವಳಿಂದ ಆ ರೂಪಾಯಿಯನ್ನು ಪಡೆದು ಜೋಪಾನವಾಗಿಟ್ಟುಕೊಂಡೆ. ಅಮ್ಮಾವರೇ, ನೀವು ಆ ರೂಪಾಯಿಯ ಮೇಲೆ ನಿಮ್ಮ ಹೆಸರನ್ನು ಬರೆದುಕೊಡಿ. ನೀವು ನನ್ನ ಕತೆಯನ್ನು ಬರೆದಾಗ ಅದನ್ನು ನನಗೆ ಖಂಡಿತ ಕಳಿಸಿಕೊಡಿ.'

ಹೀಗೆ ಹೇಳುತ್ತಾ ಭಾಗ್ಯವತಿ ಎದ್ದು ಮಂಚದ ಕೆಳಗಿಟ್ಟಿದ್ದ ಟ್ರಂಕನ್ನು ತೆರೆದಳು. ಟ್ರಂಕಿನಲ್ಲಿ ಒಂದು ಮರದ ಪುಟ್ಟ ಪೆಟ್ಟಿಗೆ ಇತ್ತು. ಅವಳು ಅದರಿಂದ ಚೆನ್ನಾಗಿ ಮಡಿಕೆ ಮಾಡಿದ ಒಂದು ರೂಪಾಯಿ ನೋಟನ್ನು ಹೊರತೆಗೆದಳು.